<u>**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ**</u>

**ಸಿ.ಸಿ. ನಂ. 361/16**

ಚಾ.ಸಾ. 105

ಪ್ರಾ.ಸಾ. 52

ಸಾಕ್ಷಿದಾರರ ಹೆಸರು - ಗಣಪತಿ ಭಟ್ಟ
ತಂದೆಯ ಹೆಸರು - ಶಂಭು ಭಟ್ಟ
ವಯಸ್ಸು - 80 ವರ್ಷ
ಉದ್ಯೋಗ - ನಿವೃತ್ತ ತಹಶೀಲ್ದಾರ
ವಾಸ್ತವ್ಯ - ಶಿರಸಿ

(ಇಂದು ದಿನಾಂಕಃ 04-05-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

<u>**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**</u>

ನಾನು 2001 ರಿಂದ 2003 ರವರೆಗೆ ಹಳಿಯಾಳದಲ್ಲಿ ತಹಶೀಲ್ದಾರ ಆಗಿ ಕರ್ತವ್ಯನಿರ್ವಹಿಸಿದ್ದೇನೆ. ಕಾರವಾರ ನಗರ ಪೊಲೀಸ್ ಠಾಣೆಯವರು ದಿನಾಂಕ 24-08-2002 ರಂದು ಕುಮಾರಿ ನಾಜನಿಸ್ ನಿಸ್ಸಾರ್ ಅಹಮ್ಮದ್ ಶೇಖ್ ಮತ್ತು ನಾಜಿಯಾ ಪರ್ವಿನ್ ನಜಮುದ್ದೀನ್ ಮುಲ್ಲಾ ಇವರು ಯಾವ ಜಾತಿಯವರು ಎಂದು ಕೇಳಿ ಪ್ರಮಾಣಪತ್ರ ಕೊಡಲು ಹೇಳಿದ್ದರು. ಆ ಬಗ್ಗೆ ನಾನು ದಾಖಲಾತಿಯನ್ನು ಪರಿಶೀಲಿಸಿ ಪ್ರವರ್ಗ ಬಿ ಮುಸ್ಲಿಂ ವರ್ಗಕ್ಕೆ ಸೇರಿದ್ದಾರೆ ಎಂದು ಪ್ರಮಾಣಪತ್ರ ಕೊಟ್ಟಿದ್ದೇನೆ. ಸದರಿ ಪ್ರಮಾಣಪತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.50 ಮತ್ತು ನಿ.ಪಿ.51 ಎಂದು, ಸಾಕ್ಷಿ ಸಹಿಯನ್ನು ನಿ.ಪಿ. 50(ಎ) ಮತ್ತು ನಿ.ಪಿ. 51(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ.

<u>**ಪಾಟೀ ಸವಾಲುಃ 7 ನೇ ಆರೋಪಿ ಪರ ಶ್ರೀ ಎಸ್.ಎ.ಕೆ. ವಕೀಲರಿಂದಃ**</u>

ನಿ.ಪಿ.50 ಮತ್ತು ನಿ.ಪಿ.51 ಸಾರ್ವಜನಿಕ ದಾಖಲಾತಿ ಎಂದರೆ ಸರಿ . ಸದರಿ ದಾಖಲಾತಿಗಳನ್ನು ಯಾರಾದರೂ ಸಾರ್ವಜನಿಕ ಹಿತಾಸಕ್ತಿ ಅಡಿಯಲ್ಲಿ ಅರ್ಜಿ ಕೊಟ್ಟರೆ ಕೊಡುತ್ತೀರಿ ಎಂದರೆ ಸಾಕ್ಷಿ ಆ ಸಮಯದಲ್ಲಿ ಸ್ಟಾಂಪ ಹಚ್ಚಿ ಅರ್ಜಿ ಕೊಟ್ಟರೆ ಕೊಡುತ್ತಿದ್ದೆವು ಎಂದು ಹೇಳುತ್ತಾರೆ.

<u>**ಪಾಟೀ ಸವಾಲು**</u> 1 ರಿಂದ 5 ಮತ್ತು 9 ನೇ ಆರೋಪಿತರ ಪರ ವಕೀಲರು ಹಾಜರಿದ್ದು ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ